# 3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು

# ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ

**CC 2535/2022** **PW- 1**

ದಿಃ **02.07.2026** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.

**ಪಾಟಿಸವಾಲುಃ ಆರೋಪಿ ಪರ ಶ್ರೀ ಎಸ್ ಎ ಎಚ್ ವಕೀಲರಿಂದಃ**

ಗಾಯತ್ರಿ ಅಗ್ರೊ ಸರ್ವಿಸ್ ಸೆಂಟರ್ ಮುಂದೆ ಮಳಿಗೆ ಇದೆ ಹಿಂದಗಡೆ ಗೋದಾಮು ಇದೆ. ಆ ದಿವಸ ಮದ್ಯಾಹ್ನ 1 ಗಂಟೆ ಹೋಗಿದ್ದೆ. ನನ್ನ ಕಚೇರಿಗೆ ಹೋಗಿ ಸಹೋದ್ಯೊಗಿಗಳಾದ ಚಾಸಾಃ 2 ರಿಂದ 4 ರವರೊಂದಿಗೆ ಆರೋಪಿಯ ಅಗ್ರೊ ಸರ್ವಿಸ್ ಸೆಂಟರಗೆ ಹೋಗಿದ್ದೆ. ನಿಖರವಾದ ಆದೇಶ ಹಾಕಿರಲಿಲ್ಲ. ಅದು ನನ್ನ ದಿನನಿತ್ಯದ ಕೆಲಸ. ಗಾಯತ್ರಿ ಅಗ್ರೊ ಸರ್ವಿಸ್ ಸೆಂಟರ್ 2010 ರಿಂದ ಬೀಜಗಳನ್ನು ಮಾರಾಟ ಮಾಡಲು ಪರವಾನಿಗೆ ಹೊಂದಿದೆ ಎಂದರೆ ಸರಿಯಲ್ಲ. ದಿಃ 26.11.2010 ರಂದು ಆರೋಪಿ ಇವರು Joint Director of Agricultural Dharwad ಇವರಿಂದ ಲೈಸನ್ಸ ಪಡೆದಿದ್ದಾರೆ ಎಂದರೆ ಸರಿಯಲ್ಲ. ಅದು ದಿಃ 17.08.2019 ರವರೆಗೂ ಚಾಲ್ತಿಯಲ್ಲಿತ್ತು ಎಂದರೆ ಸಾಕ್ಷಿ ಅದನ್ನು ತೊರಿಸಿಲ್ಲ ಎಂದು ನುಡಿಯುತ್ತಾರೆ. ನನಗೆ ತೊರಿದ ದಾಖಲೆಯಂತೆ ನಮ್ಮ ಇಲಾಖೆಯಿಂದ ಗಾಯತ್ರಿದೇವಿ ಅಗ್ರೊ ಸರ್ವಿಸಸ್ ಹುಬ್ಬಳ್ಳಿ ಇವರಿಗೆ ಲೈಸನ್ಸ ನೀಡಿದೆ ಎಂದರೆ ಸರಿ. ಸಾಕ್ಷಿ ಮುಂದುವರೆದು 2019 ರಲ್ಲಿ ಇದು ಮುಗಿದು ಹೋಗಿದೆ ಎಂದು ನುಡಿಯುತ್ತಾರೆ. ನಾನು 2022 ರಲ್ಲಿ ಮಳಿಗೆಗೆ ಹೋಗಿದ್ದೆ. ಸಾಕ್ಷಿ ಲೈಸನ್ಸನ್ನು ತಮ್ಮ ಇಲಾಖೆ ನೀಡಿದೆ ಎಂದು ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ.1 ಎಂದು ಗುರುತಿಸಲಾಯಿತು.

2. 2019 ಅಗಸ್ಟ ತಿಂಗಳಿನಿಂದ ಕೊರೊನಾ ರೊಗ ತಗುಲುತ್ತದೆ ಅಂತಾ ಸರ್ಕಾರಿ ಕಚೇರಿಗಳಲ್ಲಿ ಕಾಗದಪತ್ರಗಳನ್ನು ಸ್ವೀಕರಿಸಲು ಹಿಂದೆ ಮುಂದೆ ನೊಡುತ್ತಿದ್ದರು ಎಂದರೆ ಸರಿಯಲ್ಲ. 2020 ರ ಕೊವಿಡ್-19 ರ ಕಾರಣದಿಂದ ಲಾಕಡೌನ್ ಆಗುವವರೆಗೂ ಆರೋಪಿ ಲೈಸನ್ಸನ್ನು ನವಿಕರಣ ಮಾಡಿಸುವ ಸಲುವಾಗಿ ನಮ್ಮ ಇಲಾಖೆಗೆ ಅಲೆದಾಡಿದ್ದರು ಎಂದರೆ ಸರಿ ಯಲ್ಲ. ಮೊದಲನೆ ಲಾಕಡೌನ್ ಅವಧಿ ಮುಗಿದ ನಂತರವೂ ಸಹ ಆರೋಪಿ ನಮ್ಮ

ಇಲಾಖೆಗೆ ಲೈಸನ್ಸ ನವಿಕರಣ ಸಲುವಾಗಿ ಬರುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಆನಲೈನ್ ಅರ್ಜಿ ಹಾಕಬಹುದು ಎಂದು ನುಡಿಯುತ್ತಾರೆ. ಮುಂದುವರೆದು ಹಾಕಿದವರಿಗೆ ಚಲನ್ ಜೆನರೇಟ ಮಾಡಿಕೊಡುತ್ತಿದ್ದೆವು ಎಂದು ನುಡಿಯುತ್ತಾರೆ. ಚಲನ್ ಜೆನರೇಟ್ ಮಾಡಿ ಹಣ ತುಂಬಿದರೆ ನಾವು ಲೈಸನ್ಸ ನವಿಕರಣ ಮಾಡುತ್ತಿದ್ದೆವು. ಲೈಸನ್ಸ ನವಿಕರಣ ಸಲುವಾಗಿ ರೂ 1000/- ಮೊತ್ತ ಇದೆ. ನಮ್ಮ ಇಲಾಖೆಯ ಅಕೌಂಟ ಹೆಡ್ 0401-00-103-0-00-000 ಇದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಲೈಸನ್ಸ ನವಿಕರಣ ಮಾಡುವಾಗ ಅಂಗಡಿಯವರ ಸ್ಥಳ ದಾಸ್ತಾನು ಮತ್ತು ಮಾರಾಟ ಮಾಡಲು ಯೋಗ್ಯವಾಗಿದೆಯೊ ಇಲ್ಲವೊ ಎನ್ನುವುದನ್ನು ಪರಿಶೀಲನೆ ಮಾಡುತ್ತೇವೆ ಎಂದು ನುಡಿಯುತ್ತಾರೆ. ಎಲ್ಲ ಷರತ್ತುಗಳು ಮತ್ತು ನಿಬಂದನೆಗಳು ಪೂರ್ಣ ಆದನಂತರ ಅಂಗಡಿಯವರು ಚಲನ್ ಜೆನರೇಟ ಮಾಡಿಕೊಂಡು ಹಣ ತುಂಬಿ ಲೈಸನ್ಸ ನವಿಕರಣ ಮಾಡಿಕೊಳ್ಳುತ್ತಿದ್ದರು. ಕೊರೊನಾ ಅವಧಿಯ ಕಾಲದಲ್ಲಿ ಲೈಸನ್ಸ ನವಿಕರಣ ಮಾಡಿಸಲು ರೂ 100/- ಮಾತ್ರ ತುಂಬಬೇಕಾಗಿತ್ತು ಎಂದರೆ ಸರಿಯಲ್ಲ. ನನಗೆ ತೋರಿದ ದಾಖಲೆಯಂತೆ ನಮ್ಮ ಇಲಾಖೆಯು ಆರೋಪಿಯು ಎಲ್ಲ ಷರತ್ತುಗಳು ಪೂರೈಕೆಯಾದ ಮೇಲೆ ಚಲನನ್ನು ಜೆನರೇಟ್ ಮಾಡಿದ್ದು ಆ ನಂತರ ಆರೋಪಿ ರೂ 100/- ಫೀ ಯನ್ನು ದಿಃ 05.01.2022 ರಂದು ಭರಣ ಮಾಡಿದ್ದಾರೆ ಎಂದರೆ ಸಾಕ್ಷಿ ಇದು ತಪ್ಪು ಇದೆ ಅಂತಾ ನುಡಿದು ಮುಂದುವರೆದು ಸ್ಥಳ ಬದಲಾವಣೆಗಾಗಿ, ಬೇರೆ ಕಂಪನಿಯ ಜೊತೆ ಟೈ ಅಪ್ ಮಾಡಿದಾಗ ರೂ 100/- ಭರಿಸಬೇಕಾಗುತ್ತದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಉದ್ದೇಶ Seed amendment fee ಅಂತಾ ಬರೆದಿದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಯನ್ನು ಸಾಕ್ಷಿ ನಮ್ಮ ಇಲಾಖೆಗೆ ಫೀ ಭರಿಸಿದ್ದು ಅಂತಾ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ.2 ಎಂದು ಗುರುತಿಸಲಾಯಿತು. ನಿಡಿ.2 ನ್ನು ಫಿ ಭರಣಾ ಮಾಡುವ ಸಲುವಾಗಿ ಅಧಿಕೃತ ಮಾರಾಟಗಾರರಿಗೆ ಮಾತ್ರ ನೀಡುತ್ತೇವೆ ಎಂದರೆ ಸರಿ.

3. ಆ ದಿವಸ ನಾನು ಬೇಟಿ ಕೊಟ್ಟಾಗ ಆರೋಪಿಯ ಕಟ್ಟಡದಲ್ಲಿ ಹೊಗುತ್ತಾ ಎಡಕ್ಕೆ ಅವರ ಚೆಂಬರ್ ಕಮ್ ಆಪಿಸ್ ಇದೆ. ಸಾಕ್ಷಿ ಇದು ಮಳಿಗೆ ಆಗಿದೆ. ಮುಂದುಗಡೆ ಹೊದಂತೆ ಗೋದಾಮು ಇದೆ ಎಂದು ನುಡಿಯುತ್ತಾರೆ. sale invoice, puchase invoice, stock register, inspection book ಗಳನ್ನು ಜಪ್ತು ಮಾಡಿದ್ದಿರಾ ಅಂತಾ

ಕೇಳಿದ ಪ್ರಶ್ನೆಗೆ ಸಾಕ್ಷಿ ಅವುಗಳನ್ನು ಜಪ್ತು ಮಾಡಿಲ್ಲ ಹಾಗೂ ಮುಂದುವರೆದು ಅವು ಅಪೂರ್ಣವಾಗಿದ್ದವು ಎಂದು ನುಡಿಯುತ್ತಾರೆ. ಯಾವ ಯಾವ ಮಾಲು ಮಾರಾಟಕ್ಕೆ ಇದ್ದವು ಅಂತಾ ಮಾರಾಟದ ಬೊರ್ಡ ಇತ್ತು. ರೇಟ್ ಬೊರ್ಡ ಅಲ್ಲಿ display ಆಗುತ್ತಿತ್ತೆ ಎಂದರೆ ಸಾಕ್ಷಿ ಯಾವದೇ ರೇಟ ಬೊರ್ಡ display ಆಗಿರಲಿಲ್ಲ  ಎಂದು ನುಡಿಯುತ್ತಾರೆ. ಅಲ್ಲಿ ತೆಗೆದ ಪೊಟೊಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಜಿಲ್ಲಾಧಿಕಾರಿಗಳ ಮುಂದೆ ಹಾಜರುಪಡಿಸಿದ್ದೇನೆ. ನ್ಯಾಯಾಲಯಕ್ಕೆ ನಮ್ಮ ಇಲಾಖೆಯ ಮೊಹರು ಇರುವ ಸ್ಪೆಸಿಮೆನ್ ಸೀಲನ ಅಧೀಕೃತ ಮಾದರಿಯನ್ನು ನೀಡಿಲ್ಲ ಎಂದರೆ ಸರಿ.

4. ಯಾವದೇ ಸ್ಯಾಂಪಲ್ ಸೀಡ್ಸಗಳನ್ನು ನಾವು ಖರೀದಿಸಿಲ್ಲ. ನನ್ನ ಸಮಕ್ಷಮ ಬೇರೆ ಯಾರೂ ಗಿರಾಕಿಗಳು ಸೀಡ್ಸಗಳನ್ನು ಖರೀದಿ ಮಾಡಿಲ್ಲ. ಆ ಸೀಡ್ಸಗಳು ಆ ವೇಳೆಯಲ್ಲಿ ಆರೋಪಿ ಅಂಗಡಿಯಲ್ಲಿ ಮಾರಾಟಕ್ಕೆ ಇರಲಿಲ್ಲ ಎಂದರೆ ಸರಿಯಲ್ಲ. ಸೀಡ್ಸಗಳು ಜಿಲಾಕಾರಿಗಳಿಂದ ಬಿಡುಗಡೆ ಆದೇಶ ಪಡೆದ ಮೇಲೆ ಲೈಸನ್ಸ ಸಿಕ್ಕಿದೆ ಎಂದರೆ ಸಾಕ್ಷಿ ಲೈಸನ್ಸ ಸಿಕ್ಕಿಲ್ಲ ಎಂದು ನುಡಿಯುತ್ತಾರೆ. ನನಗೆ ತೊರಿದ ದಾಖಲೆಯಂತೆ ಆರೋಪಿ ಲೈಸನ್ಸ ರಿನೆವಲ್ ಫೀ ಯನ್ನು  ಭರಣ ಮಾಡಿದ್ದಾರೆ. ಇದನ್ನು ದಿಃ 03.06.2022 ರಂದು ಪಾವತಿ ಮಾಡಿದ್ದಾರೆ. ಸಾಕ್ಷಿ ಈ ದಾಖಲೆಯನ್ನು ನೋಡಿ ಸಾಕ್ಷ್ಯ ನುಡಿದಿದ್ದರಿಂದ ಇದನ್ನು ನಿಡಿ.3 ಎಂದು ಗುರುತಿಸಲಾಯಿತು. ನಿಡಿ.3 ಚಲನ್ ಜೆನರೇಟ ಆದಮೇಲೆ ಲೈಸನ್ಸ 5 ವರ್ಷದವರೆಗೆ ರಿನೆವಲ್ ಆಗಿದೆ ಎಂದರೆ ಸಾಕ್ಷಿ ಅಕ್ಟೊಬರ್ 2022 ರಿಂದ 2027 ರ ಅವಧಿಯವರೆಗೆ ಲೈಸನ್ಸ ರಿನೆವಲ್ ಆಗಿದೆ ಎಂದು ಸಾಕ್ಷಿ ನುಡಿಯುತ್ತಾರೆ.

5. ಕೊರೊನಾ-19 ರ ಅವಧಿಯಲ್ಲಿ ಸರ್ಕಾರದಿಂದ ಲೈಸನ್ಸ ರಿನವೆಲ್ ಸಲುವಾಗಿ ಕಚೇರಿಗೆ ಅಲೆದಾಡುವ ಅವಶ್ಯಕತೆಯಿಲ್ಲ ರಿನೆವಲ್ ಫಿ ಮಾತ್ರ ಭರಣಾ ಮಾಡಿ ಅಂತಾ ಹೇಳಿದ್ದರು ಎಂದರೆ ಸಾಕ್ಷಿ 2020 ರಲ್ಲಿ ಮಾತ್ರ ಹೇಳಿದ್ದರು ಎಂದು ನುಡಿಯುತ್ತಾರೆ. ಆ ಆದೇಶ 2022 ಅಕ್ಟೊಬರ್ ವರಗೊ ಚಾಲ್ತಿಯಲ್ಲಿತ್ತು ಎಂದರೆ ಸರಿ. ಸಾಕ್ಷಿ ಮುಂದುವರೆದು ಆರೋಪಿಯ ಲೈಸನ್ಸ expire ಆಗಿರುವುದು 2019 ರಲ್ಲಿ ಎಂದು ನುಡಿಯುತ್ತಾರೆ. 2010 ರಿಂದ ಇಲ್ಲಿಯವರಗೊ ಆರೋಪಿಯು ಎಲ್ಲಾ ನಿಯಮಾವಳಿಗಳನ್ನು ಪಾಲನೆ ಮಾಡುತ್ತಾ ಬಂದಿದ್ದರೂ ಸಹ ಬುದ್ಯಾಪೂರ್ವಕವಾಗಿ ಅವರ ಅಂಗಡಿಗೆ ಬೇಟಿ ಕೊಟ್ಟು ನಿಪಿ.1 ರಂತೆ ಪಂಚನಾಮೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಸ್ವತಂತ್ರ ಪಂಚರಾಗುವ ಸಲುವಾಗಿ ಆ

ಸ್ಥಳದಲ್ಲಿದ್ದವರಿಗೆ ನೋಟಿಸ ಕೊಟ್ಟಿಲ್ಲ. ನಾನೇ ಈ ಪ್ರಕರಣದಲ್ಲಿ ತನಿಖಾಧಿಕಾರಿ, ದೂರುದಾರ ಇರುತ್ತೇನೆ. ಡೆಲ್ಟಾ ಅಗ್ರಿ ಜೆನೆಟಿಕ್ಸ ಪ್ರೈವೆಟ ಲಿಮಿಟೆಡ್ ಇವರು ಬೀಜ ಉತ್ಪಾದನೆ ಮಾಡುವ ಸಂಸ್ಥೆ. ಈಗಲ್ ಸೀಡ್ಸ ಆ್ಯಂಡ ಬಯೊಟಿಕ್ ಇದು ಬೀಜ ಉತ್ಪಾದನೆ ಸಂಸ್ಥೆ. ಈಗಲ್ ಸೀಡ್ಸ ಆ್ಯಂಡ ಬಯೊಟಿಕ್ ಕಂಪನಿಗೆ ನಾನು ವೈಯಕ್ತಿಕವಾಗಿ ಬೇಟಿ ಕೊಟ್ಟಿಲ್ಲ. ಸಾಕ್ಷಿ ಮುಂದುವರೆದು ತಾನು ಪತ್ರ ವ್ಯವಹಾರ ಮಾಡಿದ್ದೇನೆ ಎಂದು ನುಡಿಯುತ್ತಾರೆ. ಬೀಜಗಳು ಆರೋಪಿಯ ಅಂಗಡಿಗೆ ಯಾವತ್ತು ಪೂರೈಕೆಯಾಗಿದೆ ಅಂತಾ ನ್ಯಾಯಾಲಯಕ್ಕೆ ವರದಿ ಕೊಟ್ಟಿಲ್ಲ. ತಜ್ಞರ ಅಬಿಪ್ರಾಯದ ಪ್ರಕಾರ ಬೀಜಗಳು ಮಾರಾಟಕ್ಕೆ ಯೋಗ್ಯವಾಗಿವೆ ಎಂದು ಬಂದಿದೆಯಾ ಅಂತಾ ಕೇಳಿದ ಪ್ರೆಶಗೆ ಸಾಕ್ಷಿ ಅವು ಮಾರಾಟಕ್ಕೆ ಯೋಗ್ಯವಾಗಿವೆ ಅಂತಾ ವರದಿ ಬಂದಿದೆ ಎಂದು ನುಡಿಯುತ್ತಾರೆ. ಮಾರಾಟಕ್ಕೆ ಬೀಜಗಳು ಯೋಗ್ಯವಾಗಿರುವುದರಿಂದಲೇ ಜಿಲ್ಲಾಧಿಕಾರಿಗಳು ಬೀಜಗಳನ್ನು ಬಿಡುಗಡೆ ಮಾಡಿದ್ದಾರೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಆರೋಪಿಗೆ ಯಾವದೇ ಅಪರಾಧಿಕ ಮನೋಭಾವನೆ ಇರಲಿಲ್ಲ ಹಾಗೂ ಸರ್ಕಾರದ ಇಲಾಖೆಗೆ ತಪ್ಪು ಮಾಹಿತಿ ಕೊಟ್ಟಿಲ್ಲ, ನಾವು ಆರೋಪಿಗೆ ಸಹಕಾರ ಕೊಡದೇ ಈ ರೀತಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅನಾವಶ್ಯಕವಾಗಿ ಆರೋಪಿಗೆ ಅಂಗಡಿಗೆ ಬೀಟಿ ಕೊಟ್ಟು ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ದೂರು ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

(ಶ್ರೀ ರಮೇಶ ಎಸ್ ಗಾಣಿಗೇರ)
3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.